ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.
ಸಿ.ಮಿಸ್ ಸಂಖ್ಯೆ: 23 /2019

| | | |
|---|---|---|
| ಹೆಸರುಃ | ಅಕ್ಷತ | ಪಿಡಬ್ಲ್ಯೂ -01 |
| ತಂದೆಃ | ರಘು | ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ |
| ವಯಸ್ಸುಃ | 27 ವರ್ಷ | ಭೋದಿಸಲಾದ ದಿನಾಂಕಃ10.03.2020 |
| ಕೆಲಸಃ | ಗೃಹಿಣಿ | |
| ವಾಸಸ್ಥಳಃ | ಹುಣಸೂರು | |

<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ</u> ದಿಃ 23.12.2016 ರಂದು ನನ್ನ ಮದುವೆ ಎದುರುದಾರರೊಂದಿಗೆ ಹೊಸದುರ್ಗದಲ್ಲಿ ನಡೆದಿರುತ್ತದೆ. ಮದುವೆಯಾದ ನಂತರ 5 ತಿಂಗಳು ನಾನು ಎದುರುದಾರರೊಂದಿಗೆ ವಾಸವಾಗಿದ್ದೇನೆ. ಮದುವೆಯಾದ ನಾಲ್ಕು ತಿಂಗಳುಗಳ ನಂತರ ಶ್ರುತಿ ಎಂಬ ಹುಡುಗಿ ನಮ್ಮ ಮನೆಗೆ ಬಂದಿರುತ್ತಾರೆ. ಸದರಿಯವರು ನನ್ನ ಗಂಡನ ಮೊದಲ ಮದುವೆ ಯಾವ ಕಾರಣಕ್ಕಾಗಿ ನಿಂತುಹೋಗಿರುತ್ತದೆ ಎಂದು ತಿಳಿಸುತ್ತೇನೆಂದು ಮತ್ತು ತನ್ನನ್ನು ನನ್ನ ಗೆಳತಿ ಎಂದು ಮನೆಯಲ್ಲಿ ತಿಳಿಸುವಂತೆ ಹೇಳಿ ನನ್ನನ್ನು ಮನೆಯಿಂದ 5 ನಿಮಿಷಗಳ ಕಾಲ ಹೊರಗಡೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಮತ್ತು ಸದರಿ ಶ್ರುತಿ ಹೊರಗಡೆ ಹೋದಾಗ ಶ್ರುತಿ ರವರು ನಾನು ಮತ್ತು ರಘು ರವರು 7 – 8 ವರ್ಷಗಳಿಂದ ಪ್ರೀತಿಸುತ್ತಿದ್ದೆವು. ಸದರಿ ವಿಚಾರವನ್ನು ಶ್ರದ್ಧಾ ರವರಿಗೆ ಇನ್ಸಟಗ್ರಾಂ ಮೂಲಕ ತಿಳಿಸಿದ್ದು ಅವರು ಮದುವೆಯನ್ನು ನಿಲ್ಲಿಸಿರುತ್ತಾರೆಂದು ಹೇಳಿರುತ್ತಾರೆ. ಸದರಿ ವಿಚಾರವನ್ನು ನಾನು ಎದುರುದಾರರಿಗೆ ಕೇಳಿರುತ್ತೇನೆ. ಎದುರುದಾರರು ಈ ವಿಚಾರವಾಗಿ ನನಗೆ ಹೊಡೆದು ಬಡಿದು ಮಾಡಿರುತ್ತಾರೆ, ನಂತರ ನಾನು ಹಿಂದೆ ನಡೆದಿದ್ದನ್ನು ಬಿಟ್ಟು ಮುಂದೆ ಚೆನ್ನಾಗಿರೋಣಾ ಎಂದು ತಿಳಿಸಿರುತ್ತೇನೆ. ಆ ಸಂದರ್ಭದಲ್ಲಿ ನಾನು ಒಂದೂವರೆ ತಿಂಗಳ ಗರ್ಭಿಣಿಯಾಗಿದ್ದೆ. ಆ ಸಂದರ್ಭದಲ್ಲಿ ನನಗೆ ಬಿರಿಯಾನಿ ತಿನ್ನಬೇಕು ಅನ್ನಿಸಿರುತ್ತದೆ. ನನ್ನ ಮಾವ ಸಸ್ಯಾಹಾರಿ ಆಗಿರುವುದರಿಂದ ನನ್ನ ಮೈದುನಾ ಸಹ ನನಗೆ ಮೊಟ್ಟೆಯನ್ನು ಸಹ ತಂದುಕೊಟ್ಟಿರುವುದಿಲ್ಲ. ಮಾಂಸಹಾರವನ್ನು ತಿನ್ನುವ ವಿಚಾರಕ್ಕಾಗಿ ಆ ದಿನ ಮನೆಯಲ್ಲಿ ಗಲಾಟೆಯಾಗಿದ್ದು ನನ್ನ ಮಾವ ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ನಂತರ ಆಷಾಡ ಬಂದಿದ್ದರಿಂದ ಎದುರುದಾರರು ನನ್ನ ಮಾವನ ಹೇಳಿಕೆಯ ಮೇರೆಗೆ ನನ್ನನ್ನು ನನ್ನ ತಾಯಿಯ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ಮಗುವನ್ನು

ತೆಗೆಸುವಂತೆ ತಿಳಿಸಿರುತ್ತಾರೆ. ಈ ವಿಚಾರವಾಗಿ ನಮ್ಮ ಜನಾಂಗದವರ ಸಮ್ಮುಖದಲ್ಲಿ ಪಂಚಾಯಿತಿ ನಡೆದಿರುತ್ತದೆ. ಆ ಸಂದರ್ಭದಲ್ಲಿ ನಮ್ಮ ಮಾವ ಬೇರೆ ಮನೆ ಮಾಡಿಕೊಡುವುದಾಗಿ ತಿಳಿಸಿರುತ್ತಾರೆ. ನಂತರ ಈ ವಿಚಾರವಾಗಿ ಪೋಲೀಸ್ ಠಾಣೆಗೆ ಹೋಗಿದ್ದು, ಪೋಲೀಸ್ ಠಾಣೆಯಲ್ಲಿ ಎದುರುದಾರರು ನಮಗೆ ಹುಡುಗಿ ಬೇಡವೆಂದು ತಿಳಿಸಿರುತ್ತಾರೆ.

ಮದುವೆಕ್ಕಿಂತ ಪೂರ್ವದಲ್ಲಿ ನಾನು ಏರ್ ಏಶಿಯಾದಲ್ಲಿ ನಾನು ಗ್ರೌಂಡ್ ಸ್ಟಾಫ್ ಆಗಿ ಕೆಲಸ ಮಾಡುತ್ತಿದ್ದೆ, ನನಗೆ 20 ಸಾವಿರ ಸಂಬಳ ಬರುತ್ತಿತ್ತು. ಮದುವೆಯ ಸಂದರ್ಭದಲ್ಲಿ ಕೆಲಸ ಬಿಡುವಂತೆ ತಿಳಿಸಿದ್ದರು ಮತ್ತು ನನ್ನನ್ನು ಚೆನ್ನಾಗಿ ನೋಡಿಕೊಳ್ಳುವುದಾಗಿ ಒಪ್ಪಿಕೊಂಡಿದ್ದರು. ಈಗ ನನಗೆ 2 ವರ್ಷ 2 ತಿಂಗಳ ಮಗು ಇರುತ್ತದೆ.

(ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.